ಅ) ಹಾಗಿದ್ದಲ್ಲಿ ದಿನಗೂಲಿ ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರ ಕೈಕೊಂಡ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :—

ಅ) ಹೌದು

ಆ) ದಿನಗೂಲಿ ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರವು ಪರಿಶೀಲಿಸಿ, ಸ್ವೀಕಾರಾರ್ಹ ಬೇಡಿಕೆಗಳ ಕುರಿತು ಈಗಾಗಲೇ ಸೂಕ್ತ ಕ್ರಮ ಕೈಗೊಂಡಿದೆ. ಕೆಲವು ಬೇಡಿಕೆಗಳು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ಪರಿಶೀಲನೆಯಲ್ಲಿವೆ.

ಬೀದರ್ ಜಿಲ್ಲೆಯಲ್ಲಿ ವಿದ್ಯುದ್ದೀಕರಣ ಮಾಡಲಾಗಿರುವ ಐ.ಪಿ. ಸೆಟ್ಟುಗಳು.

957(1354) ಶ್ರೀ ಗುರುಪಾದಪ್ಪ ಸಂಗನಬಸಪ್ಪ ನಾಗಮಾರಪಲ್ಲಿ (ಬೀದರ್) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀದರ್ ಜಿಲ್ಲೆಯಲ್ಲಿ ವಿದ್ಯುದ್ದೀಕರಣ ಮಾಡಲಾಗಿರುವ ಐ.ಪಿ. ಸೆಟ್‌ಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಅಂಕಿಅಂಶಗಳನ್ನು ಒದಗಿಸುವುದು)

ಆ) ಈ ಐ.ಪಿ. ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ಸರಬರಾಜು ಮಾಡುವ ಮನಸ್ಸೆಯನ್ನು ಎಂದು ಕೈಗೊಳ್ಳಲಾಯಿತು? ಹಾಗೂ ಈ ಐ.ಪಿ. ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ದರ ನೀಡಬೇಕೆಂದು ಯಾವಾಗ ತೀರ್ಮಾನಿಸಿಕೊಳ್ಳಲಾಯಿತು?

ಇ) ಜಿಲ್ಲೆಯಲ್ಲಿ ರೈತರ ಐ.ಪಿ. ಸೆಟ್‌ಗಳಿಂದ ವಿದ್ಯುತ್ ಮಂಡಳಿಗೆ ಬರಬೇಕಾದ ಬಾಕಿ ಎಷ್ಟು? (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಈ) ಜಿಲ್ಲೆಯ ರೈತರು ಐ.ಪಿ. ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆಯನ್ನು ಕೇಳಿರದಿದ್ದರೂ ಸಹಾ ಸರ್ಕಾರವೇ ಈ ಸೌಲಭ್ಯವನ್ನು ಇಲ್ಲಿಯವರೆಗೆ ನೀಡಿ ಈಗ ಏಕಾ ಏಕಿ ಇದಕ್ಕಾಗಿ ದರ ನಿಗಧಿಪಡಿಸಿದರೆ ಹಣ ಕಟ್ಟುವ ಇರುವ ರೈತರುಗಳ ಜಮೀನಿನಿಂದ ಐ.ಪಿ. ಸೆಟ್‌ಗಳನ್ನು ಕಿತ್ತುಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ವಿದ್ಯುತ್ ಮಂಡಳಿಯ ಈ ಕ್ರಮದಿಂದ ಬೆಳೆ ಬೆಳೆದಿರುವ ರೈತರು ಐ.ಪಿ. ಸೆಟ್‌ಗಳ ಮೂಲಕ ನೀರು ಐ.ಪಿ. ಸೆಟ್ಟುಗಳ ಮೂಲಕ ನೀರು ಸರಬರಾಜು ಮಾಡಲಾಗದೆ ತೊಂದರೆ ಅನುಭವಿಸುತ್ತಿದ್ದು, ಇವರ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳು ಯಾವುವು?

ಅ) ಬೀದರ್ ಜಿಲ್ಲೆಯಲ್ಲಿ ಫೆಬ್ರವರಿ 99 ರ ಅಂತ್ಯದವರೆಗೆ ವಿದ್ಯುದ್ದೀಕರಣಗೊಂಡ ನೀರಾವರಿ ಪಂಪುಸೆಟ್ಟುಗಳ ತಾಲ್ಲೂಕುವಾರು ವಿವರಗಳು ಕೆಳಕಂಡಂತೆ ಇವೆ.

	ತಾಲ್ಲೂಕು	ಸಂಖ್ಯೆ
1.	ಔರದ್	3627
2.	ಬಸವಕಲ್ಯಾಣ	8269
3.	ಭಾಲ್ಕಿ	5325
4.	ಬೀದರ್	10.370
5.	ಹುಮ್ನಾಬಾದ್	11,487
	ಒಟ್ಟು	39,078

ಆ ಹತ್ತು ಅಶ್ವ ಶಕ್ತಿಯವರೆಗಿನ ಐ.ಪಿ. ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುವುದನ್ನು ಸರ್ಕಾರಿ ಆದೇಶ ಸಂ. ಡಿಇ 115 ಇಆಬಿ 92 ದಿನಾಂಕ : 20.6.92 ಮತ್ತು ಮಂಡಳಿ ಆದೇಶ ಸಂಖ್ಯೆ : ಬಿ :10:6925 : ಬಿ :90-91 ತನಿ : 30-6-92ರ ಪ್ರಕಾರ ಜಾರಿಗೊಳಿಸಲಾಯಿತು. ಈ ಉಚಿತ ವಿದ್ಯುತ್ ಸರಬರಾಜು ಸೌಲಭ್ಯವನ್ನು ಬಾಕಿ ಹಣವನ್ನು ಚುಕ್ತಾ ಮಾಡಿದ ನಂತರವೇ ಜಾರಿಗೊಳಿಸಲು ಸೂಚಿತವಾಗಿರುತ್ತದೆ.

ಈ ಉಚಿತ ವಿದ್ಯುತ್ ನೀಡುವುದನ್ನು 1996ನೇ ವರ್ಷದಲ್ಲಿ ವಿದ್ಯುತ್ ದರಗಳನ್ನು ಪುನರ್‌ವಿಮರ್ಶಿಸಿದಾಗ ಹಿಂತೆಗೆದುಕೊಂಡು ಪ್ರತಿ ಅಶ್ವ ಶಕ್ತಿಗೆ ರೂ. 100 ರಂತೆ ವಾರ್ಷಿಕ ದರ ನಿಗದಿಪಡಿಸಲಾಯಿತು.

ಜಿಲ್ಲೆಯಲ್ಲಿ ರೈತರ ಐ.ಪಿ. ಸೆಟ್‌ಗಳಿಂದ ಮಂಡಳಿಗೆ ಬರಬೇಕಾದ ಬಾಕಿಯ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತೆ ಇವೆ.

ತಾಲ್ಲೂಕು	ಬರಬೇಕಾದ ಬಾಕಿ ಹಣ (ಲಕ್ಷ ರೂ.ಗಳಲ್ಲಿ)	
1. ಔರದ್	145.96	
2. ಬಸವಕಲ್ಯಾಣ	262.13	
3. ಭಾಲ್ಕಿ	193.10	
4. ಬೀದರ್	251.45	
5. ಹುಮ್ನಾಬಾದ್	421.33	
ಒಟ್ಟು ಮೊತ್ತ	1273.97	ಲಕ್ಷ ರೂ.

ರೈತರಿಗೆ ಸಹಾಯ ಮಾಡುವ ಉದ್ದೇಶದಿಂದ ಐ.ಪಿ. ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆಯ ವ್ಯವಸ್ಥೆಯನ್ನು ಸರ್ಕಾರದ ಆದೇಶದಂತೆ ಕೈಗೊಳ್ಳಲಾಯಿತು. ಆದರೆ ಕೆ.ಇ.ಬಿ.ಯು, ಎನ್.ಟಿ.ಪಿ.ಸಿ. ಎಫ್.ಸಿ.ಎಲ್. ಮುಂತಾದವುಗಳಿಗೆ ವಿದ್ಯುತ್ ಖರೀದಿ ಬಗ್ಗೆ ಕೋಟ್ಯಾಂತರ ರೂ.ಗಳ ಬಾಕಿ ಕೊಡಬೇಕಾಗಿದುದ್ದರಿಂದ ಆಗಸ್ಟ್ 96ರಿಂದ ಒಂದು ಅಶ್ವ ಶಕ್ತಿಗೆ ರೂ. 100 ರಂತೆ ನಾಮಿನಲ್ ದರವನ್ನು ನಿಗಧಿಪಡಿಸಬೇಕಾದಂತ ಪರಿಸ್ಥಿತಿಯು ಉಂಟಾಯಿತು ಹಾಗೂ ಈ ದರವನ್ನು ಜುಲೈ 97 ರಿಂದ ಒಂದು ಅಶ್ವ ಶಕ್ತಿಗೆ ರೂ. 300.00 ರಂತೆ ನಿಗಧಿಪಡಿಸಲಾಯಿತು. ಜುಲೈ 98 ರಿಂದ ವಿದ್ಯುತ್ ದರಗಳನ್ನು ಪರಿಷ್ಕರಿಸಿದಾಗ, ನೀರಾವರಿ ಪಂಪು ಸೆಟ್ಟುಗಳ ಬಳಕೆದಾರರಿಗೆ ವಿದ್ಯುತ್ ದರಗಳನ್ನು ಹೆಚ್ಚಿಸದೇ, ಪ್ರತಿ ಅಶ್ವಶಕ್ತಿಗೆ ರೂ. 300.00 ರ ವಿದ್ಯುತ್ ದರವನ್ನು ಮುಂದುವರಿಸಲಾಗಿದೆ. 30.6.96 ರವರೆಗೆ ರೈತರು ಕೊಡಬೇಕಾಗಿದ್ದ ಬಾಕಿ ಹಣದ ಮೇಲಿನ ಬಡ್ಡಿಯನ್ನು ಮನ್ನಾಮಾಡಲಾಯಿತು. ಆದರೆ ಹಣಕಟ್ಟದೇ ಇರುವ ರೈತರ ಜಮೀನಿನಿಂದ ಪಂಪು ಸೆಟ್ಟುಗಳನ್ನು ಕಿತ್ತುಕೊಂಡು ಹೋಗುವ ವ್ಯವಸ್ಥೆಯನ್ನು ಜಾರಿಗೊಳಿಸಿಲ್ಲ.

ಮಂಡಳಿಯ ಆದಾಯವನ್ನು ಉತ್ತಮಗೊಳಿಸುವ ಉದ್ದೇಶದಿಂದ ಹಣ ಬಾಕಿ ಉಳಿಸಿಕೊಂಡಿರುವ ಐ.ಪಿ. ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯ ನಿಲುಗಡೆಯನ್ನು ಜಾರಿಗೊಳಿಸಲಾಗುತ್ತಿದೆ. ಮಂಡಳಿಯ ಹಣಕಾಸು ಪರಿಸ್ಥಿತಿಯು ಹದಗೆಟ್ಟಿರುವುದರಿಂದ ರೈತರ ಸಹಕಾರ ಅಗತ್ಯವಾಗಿದೆ.

ನೈವೇಲಿ ಲಿಗ್ನೈಟ್ ಕಾರ್ಪೊರೇಶನ್‌ಗೆ ಪಾವತಿ ಮಾಡಬೇಕಾದ ಶುಲ್ಕ.

958(1364) ಶ್ರೀಗುರುಪಾದಪ್ಪ ಸಂಗನಬಸಪ್ಪ ನಾಗಮಾರಪಲ್ಲಿ (ಬೀದರ್) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ವಿದ್ಯುತ್ ಮಂಡಳಿಗೆ ಕೇಂದ್ರ ಸರ್ಕಾರ ಸ್ವಾಮ್ಯದ ಕೈಗಾರಿಕೆಗಳಿಂದ ಮಂಡಳಿ ನಿಗಮಗಳಿಂದ ಹಾಗೂ ಕೇಂದ್ರ ಸರ್ಕಾರ ಕಛೇರಿಗಳಿಂದ ಇಲ್ಲಿಯವರೆವಿಗೆ ಬರಬೇಕಾದ ಬಾಕಿ ಹಣದ ಮೊತ್ತವೆಷ್ಟು (ಪ್ರತಿಯೊಂದು ಸಂಸ್ಥೆಯಿಂದ ಬರಬೇಕಾದ ಬಾಕಿಯನ್ನು ವಿವರವಾಗಿ ತಿಳಿಸುವುದು)

ಆ) ಮೇಲ್ಕಂಡ ಹಣವು ಎಷ್ಟು ಅವಧಿಯಿಂದ ಬಾಕಿ ಉಳಿದಿದೆ ಇದರ ವಸೂಲಾತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಇದೇ ಸಮಯದಲ್ಲಿ ಕರ್ನಾಟಕ ವಿದ್ಯುತ್ ಮಂಡಳಿಯು ನೈವೇಲಿ ಲಿಗ್ನೈಟ್ ಕಾರ್ಪೊರೇಷನ್‌ಗೆ ಕೊಡಬೇಕಾಗಿರುವ ಬಾಕಿ ಹಣದ ಮೊತ್ತವೆಷ್ಟು; ಎಷ್ಟು ಅವಧಿಯಿಂದ ಈ ಬಾಕಿಯನ್ನು ಉಳಿಸಿಕೊಳ್ಳಲಾಗಿದೆ;

ಈ) ಈ ಬಾರಿ ಹಣವನ್ನು ಪಾವತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;